ಒಮ್ಮೊಮ್ಮೆ ಅವನಿಗೆ ಹೀಗೂ ಅನಿಸುತ್ತಿತ್ತು. ತಾನು ಇಲ್ಲದಿದ್ದರೂ ಗದಿಗೆಪ್ಪನಿಂದಲೆ ಈ ಹೊಟೇಲನ್ನು ನಡೆಸಬಹುದು. ಇತ್ತೀಚೆಗೆ ಶಿವಣ್ಣ ಚಾದಂಗಡಿಗೆ ಬರುವುದನ್ನು ಕಡಿಮೆ ಮಾಡಿರುವುದು ತನಗೆ ಒಳ್ಳೆಯದೇ ಆಗಿದೆ. ಕಾಕಾನ ಹೊಲ, ಅವನ ಜೀಪ್ ಎಂದು ಅದೇ ಲೋಕ. ಅದೂ ಒಳ್ಳೆಯದೇ. ಇದರಿಂದಲಾದರೂ ಮಾಯಿ, ಶಿವಣ್ಣ ನಿಕಟವಾಗುತ್ತಿದ್ದಾರೆ ಎನ್ನುವ ಜನರ ಬಾಯಿಗೆ ಬೀಗ ಬಿದ್ದೀತು. ತನಗಂತೂ ಆ ರೀತಿ ಕಂಡುಬಂದಿಲ್ಲ. ಮಾಲೀಕಳುಸೇವಕ ಎನ್ನುವ ಭಾವದಲ್ಲಿಯೆ ಅವರ ಒಡನಾಟವಿದೆ. ಅವರಿಬ್ಬರ ನಡುವೆ ಒಂದು ಅಂತರ ಇದ್ದೇ ಇದೆ. ಆದರೆ ಮುತ್ತಪ್ಪ ಬಂದುಹೋದಾಗಿನಿಂದ ಆ ಬಾಂಧವ್ಯ ತುಸು ಆಪ್ಯಾಯಮಾನವಾಗಿದೆಯೇನೊ? ತನ್ನೊಂದಿಗೆ ಮಾತಾಡಲು ಹಾತೊರೆಯದ ಮಾಯಿ ಅವನೊಂದಿಗೆ ಅದೆಷ್ಟು ಹೊತ್ತು ಮಾತನಾಡುತ್ತ ನಿಲ್ಲುತ್ತಾಳೆ. ಹಾಲಿನ ಡೈರಿ, ಹೊಟೇಲಿನ ಸಂತೆ, ಹೊಲದ ಪೈರು, ಊರ ಬಾವಿಯ ರಿಪೇರಿ ಓಹ್! ಅವರು ಮಾತನಾಡದ ಸಂಗತಿಯಿಲ್ಲ. ಬಸ್‌ಗದ್ದಲ ಕುರಿತೆ ತಾಸುಗಟ್ಟಲೆ ಮಾತು! ಅಷ್ಟು ಮಾತಾಡುವುದು, ನಗುವುದು ಏನಿರುತ್ತದೆ? ನಡುನಡುವೆ ಕಾಕಾ ಕೂಡ ಸೇರಿಬಿಡುತ್ತಾನೆ. ಅವನೂ ಸೇರಿದರೆ ಮುಗಿಯಿತು. ಊರೆ ಸೇರಿದಂತೆ!



ತಾನು ಎಷ್ಟೇ ಚಿಂತಿಸಿದರೂ ಸದ್ಯಕ್ಕಂತೂ ಶಿವಣ್ಣನನ್ನು ದೂರವಿಡುವುದು ಸಾಧ್ಯವಿಲ್ಲ. ಮುತ್ತಪ್ಪ ಬಂದ ಸಂದರ್ಭದಲ್ಲಿ ದೊಡ್ಡ ಹೀರೊ ಆಗಿಬಿಟ್ಟ. ಅವನು ಒಳ್ಳೆಯದನ್ನೇ ಮಾಡಿದ್ದಾನೆ. ಇದರಲ್ಲಿ ಮಾಯಿಯದೇ ತಪ್ಪು ಎನಿಸುತ್ತದೆ. ಹೇಳಿದರೆ ಉರಿದು ಬೀಳುತ್ತಾಳೆ. ಅಡಕೊತ್ತಿನಲ್ಲಿ ಸಿಕ್ಕ ಅಡಿಕೆಯಂತಾಗಿದ್ದೇನೆ! ಸುಮ್ಮನೆ ಏನೇನೊ ಯೋಚಿಸಿದರೆ ಜೀವನ ಹಾಳು! ಮಾಯಿ ಹಾಗೆಲ್ಲ ಇರಲಿಕ್ಕಿಲ್ಲ. ಸುಮ್ಮನೆ ತಲೆಯನ್ನು ಮೊಸರುಗಡಿಗೆ ಮಾಡಿಕೊಳ್ಳಬಾರದು! ಬಿಸಿ ಬಿಸಿ ಉಪ್ಪಿಟ್ಟು ತಿಂದು ಚಹಾ ಕುಡಿದ ಮೇಲೆ ಕಾಕಾ ತಾನು ಕುಳಿತಿದ್ದ ಕೋಣೆಗೆ ದೇವಣ್ಣನನ್ನು ಕರೆದ. ಅವನೊಂದಿಗೆ ಎಲ್ಲ ವಿಷಯ ಕೂಲಂಕಷ ಮಾತನಾಡಿ ಪರಿಹಾರ ಕಂಡುಕೊಳ್ಳಬಯಸಿದ ದೇವಣ್ಣ ಗದಿಗೆಪ್ಪನಿಗೆ ಸನ್ನೆ ಮಾಡಿ ಎಲ್ಲ ಗಿರಾಕಿಗಳನ್ನು ನೋಡಿಕೊಳ್ಳಲು ಹೇಳಿ ಕೈಯಲ್ಲಿ ಸಣ್ಣ ಥರ್ಮಾಸಿನ ತುಂಬ ಚಹಾ ತುಂಬಿಕೊಂಡು ಹೋದ. ಚಹಾ ಇದ್ದರೆ ದುಂಡಪ್ಪ ಕಾಕಾ ಅವನ ಮುಖ ಪ್ರಸನ್ನಚಿತ್ತವಾಗಿಯೇ ಇರುವುದು. 'ದೇವಣ್ಣ, ಮಾಯಕ್ಕಗ ಒಪ್ಪಿಸಿ ತಿರುಗಿ ನಿನ್ನ ಮನಿಗೆ ಬರೋವಂಗ ಮಾಡ್ತೇನಿ. ಆದರ ಮುಂದ ಎಂದೆಂದೂ ಈ ತರಾ ಆಗಲಾರದಂಗ ನೋಡಿಕೊಂಡು ಹೋಗೋದು ನಿನ್ನ ಜವಾಬ್ದಾರಿ. ಆಕಿ ಈಗಲೆ ಒಲ್ಲೆ ಅನ್ನಾಕಹತ್ತಿದ್ಲು. ಆದರೂ ನಾ ಹೇಳಿದೆ. ದೇವಣ್ಣ, ಒಳ್ಳೆ ಮನಸ್ಯಾ. ಅಂವನ ಮಾತು ಸ್ವಲ್ಪ ಬಿರುಸು. ಆದರ ಗುಣ ಮಾತ್ರ ಒಳ್ಳೇದು ಅಂತ. ಆಕಿ ಸುಮ್ಮನ ಆಗ್ಯಾಳು. ಇನ್ನೊಂದು ಮಾತು, ಶಿವಣ್ಣನ ಜೋಡಿ ನೀನು ಜಿದ್ದಾ, ದ್ವೇಷ ಮಾಡಿಕೊಂಡು ಹೋಗೋದು ಸರಿ ಅಲ್ಲ. ಅಂವನು ನಿನ್ನ ಹೊಟೇಲಿಗೆ ದೊಡ್ಡ ಬಲ ಇದ್ದಂಗ. ಅಂವನ ಜೋಡಿ ಸಂಬಂಧ ಕೆಡಿಸಿಕೊಳ್ಳೋದು ಬ್ಯಾಡ. ಆಮ್ಯಾಲ ಅವನು ಮಾಯಕ್ಕ ಮಾತಾಡ್ತಾರು ಅನ್ನೋದರ ಬಗ್ಗೆ ನಾ ಏನೂ ಹೇಳಂಗಿಲ್ಲ. ಅದು ಅವರವರ ವೈಯಕ್ತಿಕ. ಇಷ್ಟು ದಿನ ಹೊಟೇಲು ಒಳ್ಳೆ ರೀತಿಯಿಂದ ನಡೆದೇತಿ. ಹಂಗ ನಡೀಲಿ ಅನ್ನೋದು ನನ್ನ ಭಾವನಾ. ನಾ ಹೀಂಗ ಹೇಳ್ತೇನಿ ಅಂತ ನೀ ತಪ್ಪು ತಿಳ್ಕೊಬ್ಯಾಡ. ನನಗ ತಿಳಿದಿದ್ದನ್ನು ನಾ ಹೇಳೇನಿ. ಅನಸವ್ವನ ಬಗ್ಗೆ ನೀನು ಮದುವಿ ಆಗೋಕ್ಕಿಂತ ಮೊದಲು ಏನೂ ಹೇಳಿರಲಿಲ್ಲ ಅಂತಲ್ಲ? ಅದಕ್ಕ ಆಕಿ ಕೆಂಡ ಆಗ್ಯಾಳ. ಅದರ ಸಲುವಾಗಿ ನಿನ್ನ ಜೋಡಿ ಜಗಳಾನೂ ಮಾಡ್ಯಾಳಂತಲ್ಲ? ಅಲ್ಲೊ ನೀನೂ ಬಾಳ ಧೈರ್ಯದಾಂವ ಬಿಡಪಾ. ಅಲ್ಲೋ ಮಾಯಕ್ಕನ ಬದಲಿ ಬ್ಯಾರೆ ಯಾರಾದ್ರೂ ಇದ್ದಿದ್ರ ಇಷ್ಟೊತ್ತಿಗೆ ನಿನ್ನ ಮ್ಯಾಲ ಕೇಸ್ ಹಾಕಿರತಿದ್ರು.

ಇನ್ನೂ ಮಾಯಕ್ಕ ಬಾಳ ಒಳ್ಳೆಯವಳು ಅಂತ ನಿನ್ನ ಸುಮ್ಮನ ಬಿಟ್ಟಾಳು. ಖರೆ ನನಗೂ ಸಿಟ್ಟು ಬಂದಿತ್ತು. ಅದರ ಏನ್ ಮಾಡೋದು? ನೀನು ನಮ್ಮ ಹುಡುಗ ಅಂತ ಸುಮ್ಮನಾಗೋದು. ಆಮ್ಯಾಲ ಇನ್ನೊಂದು ಮಾತು. ಮಾಯಕ್ಕಗ ನೀನು ಕಾಡಿಸೋದು, ಬೈಯೋದು ಮಾಡಿದಿಯಂದ್ರ ಆಕಿ ಒಂದು ಕ್ಷಣಾನೂ ಇಲ್ಲಿ ಇರಂಗಿಲ್ಲಂತ ಹೇಳ್ಯಾಳು. ನೀ ಯೆಸ್ ಅಂತ ಹೇಳಿದ್ರ ಇಲ್ಲಿಗೆ ಬರ್ತಾಳು. ಏನಂತಿ? ದೇವಣ್ಣನೊಳಗೆ ದೊಡ್ಡ ಉತ್ಕ್ರಾಂತಿಯೆ ಪುಟಿದೇಳುತ್ತಿದ್ದರೂ ಅದನ್ನು ಹತ್ತಿಕ್ಕಿ ಹೂಂ ಎನ್ನುವಂತೆ ಕತ್ತು ಅಲ್ಲಾಡಿಸಿದ. ಕಾಕಾ ತನಗೆಂದಾದರೂ ಕೆಟ್ಟದ್ದು ಮಾಡಿದ್ದಿದಿಯೆ? ಮನಸ್ಸಿಗೆ ತಿಳಿಹೇಳಿದ.

***

ಇತ್ತೀಚೆಗೆ ಹೊಟೇಲಿನ ಏಳ್ಗೆಯಲ್ಲಿ ಮಾಯಿಯೂ ತುಂಬ ಆಸಕ್ತಿ ವಹಿಸುತಿದ್ದುದು ದೇವಣ್ಣನಿಗೆ ತುಂಬ ಖುಷಿ ಕೊಡುವ ವಿಚಾರವಾಗಿತ್ತು. ಹಿಂದೆಯೂ ಮಾಡುತ್ತಿದ್ದಳು. ಆದರೆ ಈಗ ಅದಕ್ಕಿಂತ ಎರಡು ಪಟ್ಟು, ಮೂರು ಪಟ್ಟು ಹೆಚ್ಚು. ಹೊಸ ಹೊಸ ತಿನಿಸು ಮಾಡುವುದರಲ್ಲಿಯೂ ಅವಳಿಗೆ ಎಷ್ಟೊಂದು ಅಭಿರುಚಿ. ಹೊಟೇಲಿನ ಆಗುಹೋಗುಗಳಲ್ಲಿ ಶಿವಣ್ಣ ಇದ್ದೇ ಇರುವನು. ಅವನನ್ನು ಬಿಟ್ಟು ಈಗಂತೂ ಏನು ಮಾಡುತ್ತಿರಲಿಲ್ಲ. ಹೇಗಿದ್ದ ಶಿವಣ್ಣ ಹೇಗಾದ ಎಂದೇ ಎಲ್ಲರೂ ಅನ್ನುವರು. ಹಾಲಿನ ಡೈರಿಯಿಂದ ದೇವಣ್ಣ ಮತ್ತು ಶಿವಣ್ಣ ಒಳ್ಳೆಯ ಲಾಭ ಗಳಿಸಿದರೆಂದು ಊರವರೆಲ್ಲರೂ ಮಾತಾಡುತ್ತಿದ್ದರು. ಶಿವಣ್ಣನ ಬಗ್ಗೆ ತಾನು ಸುಮ್ಮನೆ ತಪ್ಪು ತಿಳಿದಿದ್ದೆ ಎಂದು ದೇವಣ್ಣನಿಗೆ ಅನಿಸುವುದು. ಆತ ತನ್ನ ಹೆಂಡತಿಗೆ ಎಷ್ಟೊಂದು ಗೌರವ ಕೊಡುತ್ತಾನೆ. ಆಕೆ ಹೇಳಿದ ಎಲ್ಲ ಕೆಲಸ ಮಾಡುತ್ತಾನೆ. ಹೊಟೇಲು ಈಗ ಎಷ್ಟೊಂದು ದೊಡ್ಡದಾಗಿದೆ. ಮತ್ತೆ ನಾಲ್ಕಾರು ಟೇಬಲ್‌ಗಳನ್ನು ಶಿವಣ್ಣ ಮತ್ತು ಮಾಯಿ ಹೋಗಿ ತಂದರು. ಅವರು ಹಾಗೆ ತುಂಬ ನಿಕಟವಾಗಿ ವರ್ತಿಸಿದಾಗಲೆಲ್ಲ ಇವನ ಮನಸ್ಸಿನಲ್ಲಿ ಮುಳ್ಳು ಮುರಿಯುವುದು. ಹಾಗೇನು ಇರಲಿಕ್ಕಿಲ್ಲ. ತಾನು ಸುಮ್ಮನೆ ಸಂಶಯಪಡುತ್ತಿದ್ದೇನೆ. ಈ ಸಲ ಹೇಗೂ ತಮ್ಮೂರು ಜಾತ್ರೆಗೆ ಹೋಗುವುದಿದೆ. ಗಿರಿಯಪ್ಪನ ಗಿಣಿಯಿಂದ ತನ್ನ ಶಂಕೆಗಳನ್ನು ನಿವಾರಿಸಿಕೊಳ್ಳಬೇಕು. ಜಾತ್ರೆಗೆ ಆತ ಟೆಂಟು ಹಾಕುವುದು ಖಂಡಿತ. ಮಾಯಿಯ ಬಗ್ಗೆ ತಾನೇಕೆ ಅಷ್ಟು ಅನುಮಾನಪಡುತ್ತಿದ್ದೇನೊ ತಿಳಿಯದು. ಏನಾದರೂ ಬಾಯಿಬಿಟ್ಟು ಅಂದರೆ ಆಕೆ ಹಿಂದೆಯೆ ಹೇಳಿದ್ದಳಲ್ಲ?

'ನೀ ಬಾಯಾಗಿ ಅಂದಿದ್ದನ್ನ ನಾ ಕ್ರಿಯೆಯೊಳಗ ಮಾಡಿ ತೋರಿಸಲೇನು?' ಆಕೆ ಹಾಗೆ ನಿಜವಾಗಿಯೂ ನಡೆದುಕೊಂಡರೇನು ಮಾಡುವುದು? ಖಾಲಿ ಕುಳಿತರೆ ಇಂತಹ ಭ್ರಮೆಗಳು ಹುಟ್ಟಿಕೊಳ್ಳುತ್ತವೆಯೆಂದು ಆತ ಎದ್ದು ಪಂಚಾಯಿತಿಗೆ ಕಡೆ ನಡೆದ. ಇತ್ತೀಚೆಗೆ ದೇವಣ್ಣ ಊರಲ್ಲಿ ಒಬ್ಬ ಪ್ರಮುಖನೇ ಆಗಿದ್ದರಿಂದ ಏನಾದರೂ ಗ್ರಾಮವನ್ನು ಸುಧಾರಿಸುವ ವಿಚಾರಗಳಿದ್ದಾಗ ಇವನನ್ನು ಆಹ್ವಾನಿಸುತ್ತಿದ್ದರು. ಆತ ಆಸ್ಥೆಯಿಂದ ಬರುತ್ತಿದ್ದನಲ್ಲದೆ ಅವರು ಕೇಳಿದಾಗ ದೊಡ್ಡ ಮೊತ್ತದ ದೇಣಿಗೆ ಸಹ ಕೊಡುತ್ತಿದ್ದ. ಆದರೆ ಎಷ್ಟೇ ಪ್ರಮುಖನಾದರೂ ಹಳೆಯ ಮುಖಗಳ ಮುಂದೆ ಇವನು ಹೇಳಿದ್ದು ಏನೂ ನಡೆಯುತ್ತಿರಲಿಲ್ಲ. ಪಂಚಾಯಿತಿಯಲ್ಲಿ ಸೋಮಣ್ಣನ ಅಪ್ಪ ವಿರುಪಾಕ್ಷಪ್ಪ ಹೇಳಿದ್ದೇ ಕೊನೆಯ ಮಾತು ಆಗುತ್ತಿತ್ತು.

***

ದೇವಪ್ಪನ ಹೊಟೇಲು ವಕ್ಕರಿಸಿದ ದಿನದಿಂದ ಈ ಊರಿಗೆ ನೆಮ್ಮದಿಯೇ ಇಲ್ಲ! ಮಗ ಶಿವಣ್ಣ ಆ ಹೊಟೇಲಿನೊಳಗೆ ಹೆಜ್ಜೆಯಿಟ್ಟ ದಿನದಿಂದ ತನ್ನ ಮನೆಯ ನೆಮ್ಮದಿಯಂತೂ ಮೂರು ಕಾಸಿಗೆ ಹಾರಿಹೋಯಿತು. ಮಗ ಆ ಹೊಟೇಲಿಗೆ ಕಾಲಿಟ್ಟರೆ ಕಾಲಿಡಲಿ. ಆದರೆ ಮಾಯಿಯನ್ನು ಕಂಡು ಮರುಳಾಗಲು ಇವನಿಗೆ ಬುದ್ಧಿ ಬೇಡವೇ? ಇವನಿಗಿಂತ ಆಕೆ ನಾಕೈದು ವರ್ಷ ದೊಡ್ಡವಳಲ್ಲವೆ? ಅವಳಿಗಾದರೂ ತಿಳಿಯಬೇಕಲ್ಲವೆ? ಅವಳಿಗೆ ತಿಳಿಯದಿದ್ದರೆ ಅವಳ ಗಂಡ ದೇವಪ್ಪನಿಗಾದರೂ ತಿಳಿಯಬೇಡವೆ? ದೇವಪ್ಪನಿಗಿಂತ ಆಕೆ ಸುಮಾರು ಹದಿನೈದು ವರ್ಷ ಸಣ್ಣವಳಿರಬೇಕು. ಅವಳ ಉದ್ದೇಶ ಏನಿತ್ತೋ? ಯಾರಿಗೆ ಗೊತ್ತು? ಅನಸೂಯೆಯ ವಿಷಯದಲ್ಲಿ ಈತ ಹಣ್ಣಾಗಿದ್ದಾನೆ ಎಂದು ಅವಳಿಗೆ ತಿಳಿದಿತ್ತೆ? ಪೋಲಿಸರು ಇವನನ್ನು ಸಿಕ್ಕಾಪಟ್ಟೆ ಹೊಡೆದರೆಂದು ಹೇಳುತ್ತಾರೆ. ಅದು ನಿಜವೆ? ದುಂಡಪ್ಪನಿಗೆ ಹೊಲ ಮಾರಿ ಅವನ ಸಾಲ ತೀರಿಸಿದನೆಂದು ಹೇಳುತ್ತಾರೆ. ಊರು ಯಾವಾಗ ಈ ಹೊಟೇಲಿನ